ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	೧೯೮೧
ಸದಸ್ಯರ ಹೆಸರು	:	ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ)
ಉತ್ತರಿಸಬೇಕಾದ ದಿನಾಂಕ	:	೨೮.೩.೨೦೦೫
ಉತ್ತರಿಸುವ ಮಂತ್ರಿಗಳು	:	ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಹೆದ್ದಾರಿ ಸಂಖ್ಯೆ-೬೩ರ ಗದಗ ಜಿಲ್ಲೆ ಗದಗ ತಾಲ್ಲೂಕು ಅಡವಿಸೋಮಾಪುರ ದಿಂದ ಮುಂಡರಗಿ-ಕೊರ್ಲಹಳ್ಳಿ- ಹಡಗಲಿ - ಇಟಗಿ - ಕೊಟ್ಟೂರು - ಉಜ್ಜಯಿನಿ - ಜಗಳೂರು ಮಾರ್ಗವಾಗಿ ಹೆದ್ದಾರಿ ಸಂಖ್ಯೆ-೧೩ ರವರೆಗೆ ಇದ್ದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಸದ್ಯಕ್ಕೆ ಕೇಂದ್ರ ಸರ್ಕಾರವು ಯಾವುದೇ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುತ್ತಿಲ್ಲ. ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಸೂಕ್ತ ಸಮಯದಲ್ಲಿ ಸಲ್ಲಿಸಲಾಗುವುದು.

ಶ್ರೀ ಎಸ್.ಎಸ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಬಹುಶಃ ಆ ರಸ್ತೆಯಲ್ಲಿ ಪಂಚ ಪೀಠಗಳಲ್ಲಿ ಒಂದಾಗ ಉಜ್ಜಯನಿ ಪೀಠ ಇದೆ. ಆ ರಸ್ತೆ ಮೇಲೆ ಹಾದು ಹೋದರೆ ನಮಗೆ ನಾಚಿಕೆ ಬರುತ್ತದೆ. ತಲೆ ತಗ್ಗಿಸಬೇಕು. ಇಡೀ ದೇಶದಾದ್ಯಂತದಿಂದ ಭಕ್ತರು ಅಲ್ಲಿಗೆ ಬರುತ್ತಾರೆ. ಆ ಕಾರಣದಿಂದ ಅಲ್ಲಿ ತಾವು ದಯವಿಟ್ಟು ಈಗಾಗಲೇ ಬಳ್ಳಾರಿ ಪ್ಯಾಕೇಜ್ ಇದೆ, ಆ ಬಳ್ಳಾರಿ ಪ್ಯಾಕೇಜಿನಲ್ಲಿ ಮಾಡಿಲ್ಲ, ಬಳ್ಳಾರಿ ಪ್ಯಾಕೇಜಿನಿಂದ ದುಡ್ಡು ಕೊಟ್ಟಿದ್ದಾರೆ, ಖಡಿ ಹಾಕಿದ್ದಾರೆ, ಮುಂದೆ ದುಡ್ಡು ಇಲ್ಲವೆಂದು ಬಿಟ್ಟರು. ಖಡಿನೂ ಕಿತ್ತು ಹೋಗುತ್ತದೆ. ಮತ್ತೆ ಪುನಃ ರಸ್ತೆ ಮಾಡಬೇಕು. ಅದಕ್ಕೆ ದಯವಿಟ್ಟು ತಾವು ಅದನ್ನು ಪರಿಶೀಲನೆ ಮಾಡಿ, ಆ ರಸ್ತೆಯನ್ನು ತಕ್ಷಣ ಬಳ್ಳಾರಿ ಪ್ಯಾಕೇಜ್ ಇರಬಹುದು, ಮುಂಡರಗಿಯಿಂದ ಹಿಡಿದು ಮಾಡುತ್ತೀರಿ ಎಂದು ಉತ್ತರ ಕೊಡಬೇಕು. ಇನ್ನು ಒಂದು ಕಿಷಿಪ್‌ನಲ್ಲಿ ಕೂಡ ನನಗೆ ಉತ್ತರ ಕೊಟ್ಟಿದ್ದೀರಿ. ಅದನ್ನು ಸರ್ವೇ ಮಾಡಿಸುತ್ತೇವೆಂದು ಕಿಷಿಪ್‌ನಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ಕೇಂದ್ರ ಸಚಿವರಾದ ಮುನಿಯಪ್ಪನವರ ಹತ್ತಿರ ನಾನು ಮಾತನಾಡಿದೆ, ಆ ದಿವಸ ರಸ್ತೆ ಮೇಲೆ ಅವರಿಗೆ ಕರೆದುಕೊಂಡು ಹೋದೆ. ಇಲ್ಲ ಇದನ್ನು ಸಧ್ಯಕ್ಕೆ ಕಿಶಿಪ್‌ನಲ್ಲಿ ಮಾಡಿ ಬಿಡಿ ನಾವು ನಂತರ ಅದನ್ನು ಹೈವೇ ಆಗಿ ಕನ್‌ವರ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಆ ಕಾರಣದಿಂದ ಮಾನ್ಯ ಸಚಿವರಿಗೆ ಕೇಳುತ್ತೇನೆ, ತಕ್ಷಣ ಆ ರಸ್ತೆಯನ್ನು ಅಡವಿ ಸೋಮಾಪುರದಿಂದ ಚಿಕ್ಕಮಗಳೂರುವರೆಗೆ ಅದನ್ನು ಸಂಪೂರ್ಣವಾಗಿ ರಿಪೇರಿ ಮಾಡಿ ಕೊಡುತ್ತೇವೆಂದು ಹೇಳಬೇಕು. ಆ ನಂತರ ಅದನ್ನು ಕಿಷಿಪ್‌ನಲ್ಲಿ ಆದ್ಯತೆ ಮೇಲೆ ಯಾವಾಗ ತೆಗೆದುಕೊಳ್ಳುತ್ತೀರಿ ಎಂದ ಮಾನ್ಯ ಸಚಿವರು ಹೇಳಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್ ಪಾಟೀಲ್ ಸಾಹೇಬರು ಈ ಹೆದ್ದಾರಿಯನ್ನು ಗದಗ ನ್ಯಾಷನಲ್ ಹೈವೇಗೆ ಸೇರಿಸಬೇಕು ಎಂದು ಹೇಳಿದ್ದಾರೆ. ಸೇರಿಸುವುದು ಇದೆಯಾ ಎಂದು ಕೇಳಿದ್ದಾರೆ, ಈಗಾಗಲೇ ಅವರು ಮತ್ತು ಮಾನ್ಯ ಸಂಸತ್ ಸದಸ್ಯರು ಇಬ್ಬರೂ ಸೇರಿ ಕೇಂದ್ರ ಸಚಿವರಿಗೆ ೪.೯.೦೪ರಲ್ಲಿ ಒಂದು ಪತ್ರ ಬರೆದಿದ್ದರು. ಕೇಂದ್ರ ಸಚಿವರು ಈಗಾಗಲೇ ನ್ಯಾಷನಲ್ ಹೈವೇ ನಾವು ಯಾವುದೂ ಹೊಸದಾಗಿ ತೆಗೆದುಕೊಳ್ಳುವುದಿಲ್ಲ ಎಂದು ವಾಪಸ್ ಪತ್ರದಲ್ಲಿ ಹಿಂಬರಹ ಕೊಟ್ಟಿದ್ದಾರೆ. ಆದರೆ ಇವತ್ತು ಈ ಪ್ರಶ್ನೆ ಇವರ ಮೂಲ ಪ್ರಶ್ನೆ ಆದರೆ ಮಾನ್ಯ ಸದಸ್ಯರು ಈ ವರ್ಷ ಬಳ್ಳಾರಿ ಪ್ಯಾಕೇಜ್ ತೆಗೆದುಕೊಳ್ಳುತ್ತೇವೆಂದು ಹೇಳಿ ಎಂದು ಹೇಳುತ್ತಿದ್ದಾರೆ, ಆದನ್ನು ಪರಿಶೀಲನೆ ಮಾಡುತ್ತೇವೆ, ಏಕೆಂದರೆ ನನಗೆ ಈ ವಿಷಯ ಗೊತ್ತಿಲ್ಲ, ಪರಿಶೀಲನೆ

ಮಾಡಿ ನಾವು ರಸ್ತೆ ದುರಸ್ತಿ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಡಿ.ಆರ್. ಪಾಟೀಲ್ ಬಂದಿಲ್ಲ.... ಸಿಎಸ್ ಪುಟ್ಟರಾಜು..

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೩೫೯

ಮಾನ್ಯ ಸದಸ್ಯರ ಹೆಸರು : ಶ್ರೀ ಪುಟ್ಟರಾಜು ಸಿ.ಎಸ್. (ಪಾಂಡವಪುರ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ
(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಪ್ರಶ್ನೆ

ಅ) ಬೀದರ್-ಶ್ರೀರಂಗಪಟ್ಟಣ ರಸ್ತೆ ವಯಾ ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ ಕಾಮಗಾರಿ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು;

ಉತ್ತರ

ಅ) ಕಾಮಗಾರಿಗಳನ್ನು ಗುತ್ತಿಗೆದಾರರು ಕಾಮಗಾರಿಯ ಕಾರ್ಯಕ್ರಮಕ್ಕೆ ಅನುಗುಣವಾಗಿ ಕೆಲಸವನ್ನು ನಿರ್ವಹಿಸದೇ ಸ್ಥಗಿತಗೊಳಿಸಿದ್ದು ಇದಕ್ಕೆ ಗುತ್ತಿಗೆದಾರರೇ ಕಾರಣರಾಗಿರುತ್ತಾರೆ.

ಪ್ರಶ್ನೆ

ಆ) ಈ ರಸ್ತೆ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು:

ಉತ್ತರ

ಆ) ಈ ರಸ್ತೆ ಕಾಮಗಾರಿಯನ್ನು ಡಿಸೆಂಬರ್ ೨೦೦೬ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಶ್ನೆ

ಇ) ಕಾಮಗಾರಿ ಸ್ಥಗಿತಗೊಳಿಸಿರುವವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಉತ್ತರ

ಮಂದಗತಿಯ ನಿಮಿತ್ತ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಕಾಮಗಾರಿಗಳನ್ನು ಮುಗಿಸಲು ವಿಫಲರಾಗಿದ್ದರಿಂದ ಗುತ್ತಿಗೆ ಕರಾರಿನ ಪ್ರಕಾರ ಲಿಕ್ವಿಡೇಟೆಡ್ ಡ್ಯಾಮೇಜಸ್ (ದಂಡ) ಅನ್ನು ಸಹ ವಿಧಿಸಲಾಗಿದೆ. ಗುತ್ತಿಗೆ ಕರಾರಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಿ.ಎಸ್. ಪುಟ್ಟರಾಜು : ಶ್ರೀರಂಗಪಟ್ಟಣ ಬೀದರ್ ರಸ್ತೆ ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಪ್ರಾರಂಭ ಆಗಿತ್ತು, ಯಾವ ರೀತಿ ಆ ರಸ್ತೆ ಕೆಲಸ ಕುಂಠಿತವಾಗಿ ನಡೆಯುತ್ತಿದೆ ಎನ್ನತಕ್ಕಂಥದ್ದು ತಾವು ತಮ್ಮ ಮತ ಕ್ಷೇತ್ರಕ್ಕೆ ಹೋಗುವಂತಹ ಸಂದರ್ಭದಲ್ಲಿ